**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್‌ರವರ ನಿಯಮ 72ರ ಅಡಿಯಲ್ಲಿ ಕೋರಿರುವ ಪ್ರಶ್ನೆಗೆ ಉತ್ತರ ಸಲ್ಲಿಸುವ ಬಗ್ಗೆ**

## ವಿಷಯ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಹಂಸಧ್ವನಿ ವಸತಿ ರಹಿತ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಸರ್ಕಾರಿ ಕಿವುಡ ಮಕ್ಕಳ ವಸತಿ ಶಾಲೆ ಇಲ್ಲದ ಪ್ರಯುಕ್ತ ಸರ್ಕಾರಿ ವಸತಿಯುತ ಶಾಲೆಯನ್ನಾಗಿ ದಿನಾಂಕ:23.07.2016ರಲ್ಲಿ ಮಾರ್ಪಡಿಸಿ ಆದೇಶಿಸಲಾಗಿದೆ, ಶಾಲೆಯ ಕಟ್ಟಡವನ್ನು ಸರ್ಕಾರದ ಆದೇಶದನ್ವಯ ವಸತಿ ಶಾಲೆಯನ್ನಾಗಿ ಬೆಂಗಳೂರು ನಿರ್ಮಿತಿ ಕೇಂದ್ರದವರಿಂದ ಮಾರ್ಪಡಿಸಲಾಗಿದೆ. ವಸತಿ ಶಾಲೆಗೆ ಅವಶ್ಯವಿರುವ ಹಾಸಿಗೆ, ತಲೆದಿಂಬು, ಬೆಡ್‌ಶೀಟ್ ಮತ್ತು ಅಡಿಗೆ ಸಾಮಗ್ರಿಗಳನ್ನು ಖರೀದಿಸಲಾಗಿದೆ ಮತ್ತು ಸದರಿ ಶಾಲೆಗೆ ಪ್ರತ್ಯೇಕ ಆಯವ್ಯಯವನ್ನು ನಿಗದಿಗೊಳಿಸಿದ್ದು, ಹೆಚ್ಚುವರಿ ಆಯವ್ಯಯ ಬಿಡುಗಡೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮಾನ್ಯ ಇಲಾಖಾ ಸಚಿವರು ಕಳೆದ 8 ಅಧಿವೇಶನಗಳಿಂದಲೂ ವಸತಿ ಶಾಲೆ ಪ್ರಾರಂಭಿಸುವುದಾಗಿ ಭರವಸೆ ಸಂಖ್ಯೆ:ಮಮಇ 223 ಪಿ.ಹೆಚ್.ಪಿ 2022ರಿಂದಲೂ ಭರವಸೆ ನೀಡುತ್ತಿದ್ದು, ಸಚಿವರ ಭರವಸೆಯಂತೆ ಈವರೆಗೂ ವಸತಿ ಶಾಲೆ ಪ್ರಾರಂಭವಾಗಿರುವುದಿಲ್ಲ. ಅಧಿಕಾರಿಗಳ ನಿರ್ಲಕ್ಷ ಮತ್ತು ಉದಾಸಿನತೆಯಿಂದ ಈವರೆಗೂ ಕ್ರಮ ವಹಿಸಿರುವುದಿಲ್ಲ. ಪ್ರತಿ ದಿನ ಕಿವುಡ ಮತ್ತು ಮೂಕ ವಿದ್ಯಾರ್ಥಿ ಪೋಷಕರು ಪ್ರವೇಶ ಕೋರುತ್ತಿದ್ದು,

ಮಾನ್ಯ ಸಚಿವರ ಭರವಸೆಯಂತೆ ಕೂಡಲೇ ವಸತಿ ಶಾಲೆ ಪ್ರಾರಂಭಿಸಲು ನಿರ್ಧಿಷ್ಟ ಸಮಯವನ್ನು ಕೋರಿ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

## ಉತ್ತರ

ಸರ್ಕಾರದ ಆದೇಶ ಸಂಖ್ಯೆ: ಮಮಇ 389 ಪಿಹೆಚ್‌ಪಿ 2014, ಬೆಂಗಳೂರು, ದಿನಾಂಕ:23.07.2016ರಲ್ಲಿ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು ಸರ್ಕಾರ ವಹಿಸಿಕೊಳ್ಳಲು ಇರುವ ಎಲ್ಲಾ ನಿಯಮಗಳನ್ನು ಪಾಲಿಸಿಯೇ ಸರ್ಕಾರದ ವಶಕ್ಕೆ ಪಡೆದು ಹಾಲಿ ಇರುವ ಸಿಬ್ಬಂದಿಗಳ ಸಮೇತ, ಚರ, ಸ್ಥಿರ ಆಸ್ತಿಗಳನ್ನೊಳಗೊಂಡಂತೆ ಸರ್ಕಾರಿ ವಸತಿಯುತ ಶಾಲೆಯನ್ನಾಗಿ ನಿಯಮಾನುಸಾರ ಮಾರ್ಪಡಿಸಲು ಮಂಜೂರಾತಿಯನ್ನು ನೀಡಲಾಗಿದೆ.

ಸದರಿ ಶಾಲೆಯನ್ನು ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಬೇಕಾದರೆ ಸದರಿ ಶಾಲೆಗೆ ಅವಶ್ಯಕವಿರುವ ಹುದ್ದೆಗಳ ಮಂಜೂರಾತಿ, ಆಯವ್ಯಯ ವಿವರಗಳು, ಮುಂತಾದ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಲು ಕ್ರಮವಹಿಸಲಾಗುತ್ತಿದೆ.

ಮುಂದುವರೆದು ನಿರ್ಮಿತಿ ಕೇಂದ್ರ ಬೆಂಗಳೂರು, ಇವರಿಂದ ಪಡೆದ ಅಂದಾಜು ಕಾಮಗಾರಿ (Up gradation works, compound wall, sump tank and building works)ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಯೂ ಪೂರ್ಣಗೊಂಡಿರುತ್ತದೆ.

149-6
872-97



ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ಶಾಲೆಯ ಉಳಿಕೆ ಕಾಮಗಾರಿಗಳಾದ 2ನೇ ಮಹಡಿಯಲ್ಲಿ ಅಪೂರ್ಣಗೊಂಡಿರುವ ಕಾಮಗಾರಿಗಳಾದ ಕಿಟಕಿ, ಬಾಗಿಲು, ವಿದ್ಯುತ್ ಸಂಪರ್ಕ, ಫ್ಲೋರಿಂಗ್ ಮತ್ತು ಕಟ್ಟಡದ ಮೇಲ್ಛಾವಣಿಯನ್ನು ಪೂರ್ಣ ಪ್ರಮಾಣದಲ್ಲಿ ದುರಸ್ತಿಗೊಳಿಸಬೇಕಾಗಿರುವುದರಿಂದ ಆಯವ್ಯಯವನ್ನು ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ.

ಪ್ರಸ್ತುತ ಶಾಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ 11 ವಿದ್ಯಾರ್ಥಿಗಳು ದಾಖಲಾಗಿರುವುದು ಕಂಡುಬಂದಿರುತ್ತದೆ ಹಾಗೂ ಸದರಿ ಶಾಲೆಯಲ್ಲಿ 03 ಶಿಕ್ಷಕರು ಹಾಗೂ 02 ಶಿಕ್ಷಕೇತರರು ಸೇರಿದಂತೆ 05 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಶಾಲೆಯನ್ನು ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಬೇಕಾದರೆ ಶಾಲಾ ವಿಭಾಗಕ್ಕೆ ಹಾಗೂ ವಸತಿ ವಿಭಾಗಕ್ಕೆ ಪ್ರತ್ಯೇಕವಾದ ಹುದ್ದೆಗಳ ಸೃಜನೆಯಾಗಬೇಕಾಗಿರುತ್ತದೆ. ಆರ್ಥಿಕ ಇಲಾಖೆಗೆ ಈ ಕುರಿತು ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ:ಮಮಇ 41 ಪಿಹೆಚ್‌ಪಿ 2023

Halappa BA.

(ಆಚಾರ ಹಾಲಪ್ಪ ಬಸಪ್ಪ)
ಮಾನ್ಯ ಗಣಿ ಮತ್ತು ಭೂ ವಿಜ್ಞಾನ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು.